ಶ್ರೀ ಎಂ. ಬಸವಣ್ಣಾಜು.—ಕೊಣನೂರು ಹಿರ್ಲೆಯಲ್ಲಿ ಕೆಲವು ರಸ್ತೆಗಳು ತಿಳಿವಳಿಕೆಯಾಗಿರುವುದರಿಂದ ಅಲ್ಲಿ ಬಸ್ಸುಗಳ ಓಡಾಟವನ್ನು ನಿಲ್ಲಿಸಬೇಕೆಂದು ಡಿವಿಜನಲ್ ಕಮಿಷನರು ಬರೆದಿರುವುದು ನಿಜವೇ ?

Sri MOHAMED ALI.—No, Sir.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಮಾರ್ಗದಲ್ಲಿ ಸರಕಾರಿ ಬಸ್ಸನ್ನು ಓಡಾಡಿಸಲು ಇನ್ನೂ ಎಷ್ಟು ಕಾಲ ಬೇಕು ?

Sri MOHAMED ALI.—It depends upon the improvement of the road. The moment it becomes fit for operating the buses; it will be nationalised and arrangements will be made to introduce the Road Transport Corporation buses.

Sri DIGAMBAR RAO B. KALMANKAR.—Answer to (*c*) may I know when these representations were made ?

Sri MOHAMED ALI.—I am sorry, that information is not available with me-just now.

Amount provided by the P. W. D. For Different Works

15. Sri B. BHASKAR SHETTY (Kaup).—

Will the Minister for Public Works be pleased to state:—

(*a*) the amount provided by the P. W. D. to each district every year from 1962-1963 for different works;

(*b*) out of this, the amount spent in each district every year for different works;

(*c*) out of this, the amount specially spent for irrigation works in each district every year ?

A.—Sri ALUR HANUMANTHAPPA (Deputy Minister for Minor Irrigation).—

(*a*) The following statements giving the particulars of grant and expenditure, are placed on the Table of the House.*

(1) Statement 'A' Communications and Buildings.
(2) Statement 'B' Minor Irrigation Original works.
(3) Statement 'C' Minor Irrigation Maintenance (Circlewise figures are furnished).
(4) Statement 'D' Major and Medium Irrigation. (Since the Major and Medium Irrigation works serve more than one District project-wise figures are furnished).

(*b*) *Vide* particulars in the above statement.*

(*c*) *Vide* Statements 'B' and 'D' above

*Copies placed in the Mysore Legislature Library *Vide* No. 3 dated 22-1-1968.

ಶ್ರೀ ಬಿ. ಭಾಸ್ಕರಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 66—67ಕ್ಕೆ ಈ ಸಣ್ಣ ನೀರಾವರಿ ಯೋಜನೆಯಲ್ಲಿ 20 ಲಕ್ಷದ 72 ಸಾವಿರ ರೂಪಾಯಿ ಗ್ರಾಂಟು ಕೊಟ್ಟಿದೆ, ಆದರಲ್ಲಿ 15 ಲಕ್ಷದ 49 ಸಾವಿರ ರೂಪಾಯಿ ಮಾತ್ರ ಖರ್ಚಾಗಿದೆ, ಬಾಕಿಯಿದು ಖರ್ಚಾಗದೇ ಉಳಿಯಲಿಕ್ಕೆ ಕಾರಣವೇನು ?

† **ಶ್ರೀ ವೀರೇಂದ್ರ ಪಾಟೀಲ್.**—ಮಾನ್ಯ ಸದಸ್ಯರ ಮುಂದೆ ಪಟ್ಟಿ ಇದೆ. ಎಲ್ಲಾ ಕಡೆಯಲ್ಲೂ ಖರ್ಚು ಕಡಿಮೆಯಾಗಿದೆ, ಪ್ರತಿಯೊಂದರಲ್ಲೂ ಕಾರಣವೇನು ಎನ್ನುವುದನ್ನು ಬೇಕಾದರೆ ತರಿಸಿ ಕೊಡುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೋಡ್ಸ್ ಅಂಡ್ ಬಿಲ್ಡಿಂಗ್ಸ್‌ನಲ್ಲಿ ಸ್ಪೆಷಲ್ ಪೆಸ್ಟ್ ಕೋಸ್ಟ್ ರೋಡ್ ಮತ್ತು ಫಿರ್ ಕ್ಯಾರೀಯಿಂಗ್ ರೋಡ್ಸ್ ಎಲ್ಲಾ ಸೇರಿಸಿ ಲೆಕ್ಕಾಚಾರ ಕೊಟ್ಟಿದ್ದಿರಾ ?

ಶ್ರೀ ವೀರೇಂದ್ರ ಪಾಟೀಲ್.—ಅದರಲ್ಲಿ ಎಲ್ಲಾ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಇಷ್ಟು ಹಣ ಲ್ಯಾಪ್ಸ್ ಆಗುವುದಕ್ಕೆ ಸರ್ಕಾರದ ಅದಕ್ಷತೆ ಕಾರಣ ಎಂದರೆ ಏನು ಹೇಳುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಅದು ಕಾರಣವಲ್ಲ. ಪ್ರತಿಯೊಂದು ಸಲವೂ ಗ್ರಾಂಟು ಕೊಡುತ್ತೇವೆ, ಕೇಂದ್ರದಿಂದಲೂ ಈ ರೀತಿ ಸಹಾಯ ಬರುತ್ತದೆ ಎಂದು ಲೆಕ್ಕ ಹಿಡಿದುಕೊಂಡು ಇರುತ್ತೇವೆ, ಕೇಂದ್ರದಿಂದ ಸಹಾಯ ಬರದಿದ್ದರೆ, ಸ್ಪಿಲ್ ಓವರ್ ವರ್ಕ್ಸ್ ಮೇಲೆ ಕಾನ್‌ಸನ್‌ಟ್ರೇಟ್ ಮಾಡಿ ಎಂದು ಹೇಳಿದಾಗ ಅದಕ್ಕೆ ಎಷ್ಟು ಖರ್ಚಾಗಬೇಕಾಗುತ್ತದೆಯೋ ಅಷ್ಟು ಮಾತ್ರ ಖರ್ಚಾಗುತ್ತದೆ.

Sri DIGAMBAR RAO B. KALMANKAR.—Sir, it is stated statements A, B are placed. We have not been provided with any such statements ?

Sri VEERENDRA PATIL.—I have made it clear that the statements has been placed on the Table of the House.

ಶ್ರೀ ಬಿ. ಪಿ. ಗಂಗಾಧರ್.—ಖರ್ಚು ಮಾಡಿರತಕ್ಕ ಹಣದಲ್ಲಿ ತುಮಕೂರು ಜಿಲ್ಲೆಗೆ ಬಹಳ ಕಡಿಮೆ ಹಣ ಖರ್ಚಾಗಿದೆ, ಈ ಬಗ್ಗೆ ಈ ವರ್ಷವಾದರೂ ಏನಾದರೂ ಸ್ವಲ್ಪ ಹೆಚ್ಚು ಗಮನ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಹೇಳುತ್ತೇನೆ. ಇದರಲ್ಲಿ ರೋಡ್ಸ್ ಅಂಡ್ ಬಿಲ್ಡಿಂಗ್ಸ್, ಮೇಜರ್ ಇರಿಗೇಷನ್, ಮೈನರ್ ಇರಿಗೇಷನ್ ಎಲ್ಲಾ ಬರುತ್ತದೆ.

ಶ್ರೀ ಬಿ. ಪಿ. ಗಂಗಾಧರ್.—ಕನ್‌ಸ್ಟ್ರಕ್ಷನ್ ಆಫ್ ರೋಡ್ಸ್ ಇರಿಗೇಷನ್ ಚಾನಲ್ಸ್ ಎಲ್ಲದರಲ್ಲೂ ತುಮಕೂರು ಜಿಲ್ಲೆಯನ್ನು ಡಿಸ್ಕ್ರಿಮಿನೇಟ್ ಮಾಡಿದಹಾಗೆ ಕಾಣುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಬೇರೆ ಜಿಲ್ಲೆಗಳನ್ನು ನೋಡುವಾಗ 62 ರಿಂದ ಗುಲ್ಬರ್ಗಾ ಜಿಲ್ಲೆಗೆ ರೋಡ್ಸ್ ಅಂಡ್ ಬಿಲ್ಡಿಂಗ್ಸ್‌ಗಾಗಿ ಜಾಸ್ತಿ ಹಣ ಖರ್ಚಾಗಿರುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಇದನ್ನು ಜಿಲ್ಲಾವಾರು, ಪಾಪ್ಯುಲೇಷನ್‌ವೈಸ್ ಹಂಚುವುದ ಕ್ಕಾಗುವುದಿಲ್ಲ, ಏನು ಖರ್ಚಾಗಬೇಕೆಂಬುದು ಬಡ್ಜೆಟ್‌ನಲ್ಲಿ ಇದೆ ಅದರಲ್ಲಿ ಗುಲ್ಬರ್ಗಾಜಿಲ್ಲೆ ಲೋಯಸ್ಟ್.

† Indicates that the remarks or speeches have not been revised by the member concerned.